ಬಿದ್ದದ್ದುಂಟು.

ಅದೆಲ್ಲ ಒಂದು ಪ್ರಹಸನ. ಆದರೆ, ಕೆಲವು ಮಂದಿ ಅದರಲ್ಲೂ ವಿದ್ಯಾರ್ಥಿಗಳು, ಮಹಿಳಾ ಸಂಘದವರು, ಎನ್.ಜಿ.ಒ.ದಲ್ಲಿಯ ಕೆಲವರು, ರಾಜಕೀಯ ನಾಯಕರಲ್ಲಿ ಕೆಲವರು, ಮಾನವ ಹಕ್ಕುಗಳವರು 'ಅಜೇಯ'ಳಿಗೆ ಹೇಗಾದರೂ ನ್ಯಾಯ ದೊರಕಿಸಬೇಕೆಂದು ಹಟಕ್ಕೆ ಬಿದ್ದುದಷ್ಟೇ ಅಲ್ಲದೆ ಅನೇಕ ತರದ ಪ್ರತಿಭಟನೆಗಳನ್ನು ಮಾಡಿದರು. ಮಾಡುತ್ತಲೇ ಇದ್ದಾರೆ.

ಎಲ್ಲಕ್ಕೂ ಮುಖ್ಯವಾಗಿ ಅಂದು ಈ ಪ್ರಕರಣವನ್ನು ಹತ್ತಿರದಿಂದ ಪರೀಕ್ಷಿಸಲು ಬಂದ ಪೊಲೀಸ್ ಆಫೀಸರ್ ಮುಖ ನೋಡಬೇಕು. ತುಂಬಾ ಗಂಭೀರವಾಗಿದೆ. ತುಂಬಾ ಸೌಮ್ಯವಾಗಿ ಮಾತಾಡುತ್ತಿದ್ದಾನೆ. ಆತ ಅವರನ್ನು ತಪ್ಪದೇ ಬಂಧಿಸುತ್ತಾನೆನಿಸಿತು. ಆ ಪೊಲೀಸ್ ಆಫೀಸರ್ ಅವರನ್ನು ಹಿಡಿಯಲು ಪಣತೊಟ್ಟು ಕೂತ ಕೂಡ. ಅಷ್ಟೇ ಅಲ್ಲದೆ ತುಂಬಾ ಬೆಂಬಲಿಸಿ ಮಾತಾಡಿದ. ಸ್ವಲ್ಪ ಧೈರ್ಯ ಬಂತು ನಮ್ಮ ಮನೆಯವರಿಗೆ.

ಇಂತಹ ಘಟನೆ ನಡೆದಾಗ ಟೀವಿಯಲ್ಲಿ ಅನೇಕ ಪ್ರಮುಖರು ಮಹಿಳೆಯರ ಉಡುಗೆತೊಡುಗೆ, ಹುಡುಗಿಯರು ಒಂಟಿಯಾಗಿ ಓಡಾಡುವುದು, ರಾತ್ರಿ ಹೊತ್ತಿನಲ್ಲಿ ಹೊರಗೆ ಸುತ್ತಾಡುವುದು... ಇಂತಹ ವಿಷಯಗಳ ಮೇಲೆ ದೊಡ್ಡದಾಗಿ ಚರ್ಚಿಸಿದಂತೆ ಆಗಲೂ ಚರ್ಚೆಗಳು ನಡೆದವು. ಹುಡುಗಿಯರು ಹಾಕಿಕೊಳ್ಳುವ ವೇಷಭೂಷಣ ಸರಿಯಾಗಿಲ್ಲದಿರುವುದರಿಂದಲೇ ಇಂತಹವು ನಡೆಯುತ್ತವೆಯೆಂದು ಕೆಲವರು ಅತಿ ತಿಳಿಗೇಡಿತನದಿಂದ ತುಚ್ಛವಾಗಿ ಮಾತಾಡುತ್ತಿದ್ದರು. ಅಂಥವರ ಮುಂದೆ ನಗ್ನವಾಗಿ ನಿಲ್ಲಬೇಕೆನಿಸಿತು. ನಗ್ನ ದೇಹ ಅಪರಾಧಿಗಳನ್ನು ತಯಾರಿಸುತ್ತದೆಯೇ. ಅತ್ಯಾಚಾರಕ್ಕೆ ಒಳಗಾದವರನ್ನೇ ಅಪರಾಧಿಗಳಂತೆ ಕಾಣುವ ಈ ಮನಸ್ಥತ್ವ ಎಂದಿಗೂ ಬದಲಾಗದೆ?

ಅಸಲು ನನ್ನ ಮೇಲೆ ಆ ಮೂರ್ಖರು ಏರಿ ಬಂದದ್ದಾದರೂ ಯಾಕೆ? ಅವರ ಮನಸ್ಸಿನಲ್ಲಿದ್ದುದಾದರೂ ಏನು? ಯಾಕೆ ಹೀಗೆ ನಡೆದುಕೊಂಡರು...

ಆ ಘಟನೆ ನಡೆದ ದಿನ ನನ್ನನ್ನು ನೋಡಲು ಬಂದ ಮಾನವ ಹಕ್ಕುಗಳ ವಕೀಲ ಜಿವಿ ಆನಂತರ ಕೂಡ ನನ್ನನ್ನು ಭೇಟಿಯಾಗುತ್ತಿದ್ದರು. ಅವರ ಸ್ನೇಹ ಸ್ವಭಾವ ತುಂಬಾ ಆತ್ಮೀಯವೆನಿಸಿದ್ದರಿಂದ ಬಹಳಷ್ಟು ವಿಷಯಗಳನ್ನು ಅವರೊಂದಿಗೆ ಹಂಚಿಕೊಳ್ಳುತ್ತಿದ್ದೆ.

ಆ ಘಟನೆ ನಡೆದಾದ ಮೇಲೆ ತುಟಿಗಳಿಗೆ ಗಾಯದ ಕಲೆಗಳು, ಎಲ್ಲಿ ನೋಡಿದರೂ ಮೈಮೇಲೆ ಹಲ್ಲಿನ, ಉಗುರಿನ ಗಾಯದ ಗುರುತುಗಳು, ಸರ್ಜರಿಗಳು, ದೇಹದಲ್ಲಿ ಇನ್‌ಫೆಕ್ಷನ್ ಕಡಿಮೆ ಮಾಡುತ್ತವೆ ಎನ್ನುತ್ತ ಆ್ಯಂಟಿಬಯಟಿಕ್ಸ್. ದೇಹದ ಮೇಲೆ ಮಾದ ಗಾಯದ ಮಚ್ಚೆಗಳು, ಇನ್ನೂ ಮಾಯದ ಹಸಿಗಾಯಗಳು ಬೆನ್ನಿನ ಮೇಲೆ ಹಾಗೆಯೇ ಇವೆ. ಗರ್ಭಾಶಯವನ್ನು ಶಾಶ್ವತವಾಗಿ ಕಳೆದುಕೊಂಡ ಸರ್ಜರಿಯ ನೋವು ತಿವಿಯುತ್ತಲೇ ಇದೆ ಇತ್ತೀಚೆಗೆ. ಮನಸ್ಸೆಲ್ಲಾ ಹೊತ್ತಿ ಉರಿಯುತ್ತಿದೆ.

ಅವರಿಗೆ ಎಂತಹ ಶಿಕ್ಷೆಯನ್ನು ನ್ಯಾಯಾಲಯ ಪ್ರಕಟಿಸಬಹುದು. ಯಾವ ಶಿಕ್ಷೆ ಇದಕ್ಕೆ ಸಮನಾದುದು. ತುಂಬಾ ಜನ ಗಲ್ಲು ಶಿಕ್ಷೆ ಎನ್ನುತ್ತಾರೆ. ಹೌದು, ಗಲ್ಲು ಶಿಕ್ಷೆಯೇ ಸರಿ.

ಅಕ್ಕರೆಯಿಂದ ಬೆಳೆಸಿದ ಮಗಳು, ಹೊಸದಾಗಿ ಕೆಲಸಕ್ಕೆ ಸೇರಿ ಮೊದಲ ಸಂಬಳ ತೆಗೆದುಕೊಂಡು ಫೈವ್‌ಸ್ಟಾರ್ ಹೋಟೆಲ್‌ಗೆ ಡಿನ್ನರ್‌ಗೆಂದು ಕರೆದೊಯ್ದ ಮಗಳು, ಬುದ್ಧಿವಂತ, ಯೋಗ್ಯನಾದ ಚೈತನ್ಯ ಪ್ರೀತಿಸಿದರೆ ಅವನನ್ನೇ ತನ್ನ ಜೀವನದ ಸಂಗಾತಿಯೆಂದುಕೊಂಡ ಮಗಳು, ಅಸಲು ಎಂದೂ ಸಣ್ಣ ಹಿಂಸೆಯನ್ನೂ ಸಹ ಅನುಭವಿಸಬಲ್ಲಳೆಂದು ಊಹಿಸದ ಅಪ್ಪ ಅಮ್ಮ ದಿಗ್ಭ್ರಾಂತರಾಗಿ ದುಃಖ